ಹಕ್ಕಿ ಹಾರುತ್ತಿದೆ ನೋಡಿದಿರಾ ಪದ್ಯದ ಸಾರಾಂಶ

ಕವಿ :- ದ.ರಾ ಬೇಂದ್ರೆ ಕಾಲ:- ಕ್ರಿ.ಶ ೧೮೯೬

ಸ್ಥಳ :- ಧಾರವಾಡ. ವೃತ್ತಿ :- ಅಧ್ಯಾಪಕರು

ಕೃತಿಗಳು :- ಗರಿ,ನಾದಲೀಲೆ,ಉಯ್ಯಾಲೆ, ಗಂಗಾವತರಣ,ಮೇಘದೂತ,ಅರಳು ಮರಳು ಇತ್ಯಾದಿ

ಬಿರುದುಗಳು :- ವರಕವಿ,ಕಾವ್ಯ ಗಾರುಡಿಗ

ಶ್ರೇಷ್ಟ ಕಾವ್ಯ :- ನಾಕುತಂತಿ

ಪ್ರಶಸ್ತಿಗಳು :-ಜ್ಞಾನಪೀಠ ಪ್ರಶಸ್ತಿ,ಕೇಂದ್ರ ಸಾಹಿತ್ಯ ಅಕಾಡೆಮಿ,ಪದ್ಮಶ್ರೀ ಪ್ರಶಸ್ತಿ

ಆಕರ :- ಗರಿ ಕವನ ಸಂಕಲನ

ನಿಧನ :-೧೯೮೧.

## ಪದ್ಯದ ಸಾರಾಂಶ

ಹಗಲು ರಾತ್ರಿಗಳು ಕಳೆದು ದಿನದಿನಗಳೂ ಉರುಳುತ್ತಿವೆ.ಈ ಕ್ರಿಯೆ ಹಿಂದಿನಿಂದಲೂ ನಡೆತಾ ಬಂದಿದೆ.ಕವಿ ಬೇಂದ್ರೆ ಹಾರುವ ಹಕ್ಕಿಯನ್ನು ಚಲಿಸುವ ಕಾಲಕ್ಕೆ ತುಂಬಾ ಮಾರ್ಮಿಕವಾಗಿ ಹೋಲಿಕೆ ಮಾಡಿದ್ದಾರೆ..ಕಾಲ ಪಕ್ಷಿಯ ಚಲನೆ ನಿರಂತರ ಹಾಗೂ ವಿಶ್ವವ್ಯಾಪಕವಾದುದು ಅದರ ಮೇಲೆ ಮನುಷ್ಯನ ನಿಯಂತ್ರಣ ಅಸಾಧ್ಯ...ಕಾಲ ನಿಂತ ನೀರಲ್ಲ ಸದಾ ಅದು ಚಲಿಸುತ್ತಿರುವುದು..ಕಣ್ಣು ಬಿಟ್ಟು ನೋಡುವಷ್ಟರಲ್ಲಿ ಅದು ದೂರ ದೂರ ಚಲಿಸಿರುತ್ತದೆ ಇಂಥಹ ಚಲನಶೀಲವುಳ್ಳ ಹಾರುವ ಕಾಲ ಪಕ್ಷಿಯನ್ನು ಕಂಡಿರುವಿರಾ ಎಂದು ಕವಿ ಕೇಳುತ್ತಾರೆ.

ಕಾಲಪಕ್ಷಿಗೆ ಕಪ್ಪು ಬಿಳಿ ಬಣ್ಣದ ಬಾಲಗಳಿವೆ..ಇದರರ್ಥ ಕಾಲದ ಇತಿಹಾಸದಲ್ಲಿ ವರ್ಣಭೇದ ನೀತಿ ಜಗತ್ತನ್ನು ತಲ್ಲಣಗೊಳಿಸಿರುವ ವಿಚಾರ ಅಲ್ಲಗಳೆಯಲಾಗದು.ಹಾಗೆ ಕಾಲ ಪಕ್ಷಿಗೆ ಹೊಳೆಯುವ ಬಿಳಿ ಬಣ್ಣದ ಗರಿಗಳುಂಟು ಇದು ಒಳಿತು ಹಾಗೂ ಸಮಾಜದ ಸಮೃದ್ಧಿಯ ಪ್ರತೀಕ.ಹಾಗೆ ಕಾಲ ಪಕ್ಷಿ ಕೆಂಪಾದ ಬಂಗಾರದ ಬಣ್ಣದ ಗರಿಗಳಿಂದ ಕೂಡಿದ ಎರಡು ರೆಕ್ಕೆಗಳು ಆ ಹಕ್ಕಿಯ ಪಕ್ಕದಲ್ಲಿವೆ.ಇಂಥ ಕಾಲ ಪಕ್ಷಿಯನ್ನು ಕಂಡಿದಿರಾ?

ನೀಳವಾದ ದಟ್ಟಮೋಡಗಳ ಸಮೂಹಗಳಿಂದ ಕಾಲ ಕೂಡಿದೆ.ಪಕ್ಷಿಯ ರೆಕ್ಕೆಗಳು ಮುಗಿಲಿಗೆ ರೆಕ್ಕೆಗಳು ಹುಟ್ಟಿಕೊಂಡಿರುವಂತೆ ಕಾಣುತ್ತವೆ.ಬದುಕಿನ ಪ್ರಯಾಣದಲ್ಲಿ ಗುರಿ ನಿರ್ಧಾರಗಳು ಕವಲು ಒಡೆಯುವುದು ಸಹಜ ಅದು ಕಾಲದ ಮಹಿಮೆಯೆ!!ಕಾಲ ಪಕ್ಷಿ ನಕ್ಷತ್ರಗಳು ಮಾಲೆಯನ್ನು ಸಿಕ್ಕಿಸಿಕೊಂಡು ಸೂರ್ಯ ಚಂದ್ರರನ್ನ ಕಣ್ಣುಗಳನ್ನಾಗಿ ಮಾಡಿಕೊಂಡಿವೆ ಕಾಲ ಪಕ್ಷಿಯ ಕಂಡಿರಾ? ಇಲ್ಲಿ ಸೂರ್ಯ ಚಂದ್ರ ಹಗಲು ಇರುಳನ್ನು ಸಂಕೇತಿಸುವದರ ಜೊತೆಗೆ ಜನನ ಮರಣ,ಕಷ್ಟ ಸುಖವನ್ನು ಪರೋಕ್ಷವಾಗಿ ಸೂಚಿಸುತ್ತವೆ ಕಾಲ ಪಕ್ಷಿಯ ಪಯಣದಲ್ಲಿ ಇವು ಸಾಮಾನ್ಯ ಎಂಬುದು ಕವಿಯ ಅಭಿಮತ.

ಕಾಲದ ಸುಳಿಯಲ್ಲಿ ಅನೇಕ ರಾಜ್ಯ ಸಾಮ್ರಾಜ್ಯಗಳು ವೈಭವ ಅಧಿಕಾರ ನಡೆಸಿ ನಂತರ ಅಧಪತನವಾಗಿದ್ದು ಇತಿಹಾಸ ನಮಗೆ ತಿಳಿಸುವುದು ಇದಲ್ಲದೇ ಈ ಕಾಲ ಘಟ್ಟಗಳು ಅನೇಕ ಮಂಡಲ ಗಿಂಡಲಗಳು ನಾಶವಾಗಿವೆ..ಕಾಲ ಪಕ್ಷಿ ಸಾರ್ವಭೌಮರಾಗಿ ಮೆರೆಯುವವರನ್ನು ಅಹಂಕಾರವನ್ನು ಇಲ್ಲವಾಗಿಸಿದೆ..ಕಾಲದ ಇತಿಹಾಸದಲ್ಲಿ ರಷ್ಯಾ ಒಕ್ಕೂಟ,ಯುಗೋಸ್ಲೋವಿಯಾ ಇತ್ಯಾದಿ ದೇಶಗಳು ವಿಸ್ತಾರವಾಗಿ ಅನಂತರ ಚೂರು ಚೂರಾಗಿ ವಿಂಗಡಣೆ ಆಗಿದ್ದು ಕಾಣಬಹುದು..ಕಾಲ ಪಕ್ಷಿ ಅನೇಕ ದೊಡ್ಡ ದೊಡ್ಡ ಭೂಭಾಗಗಳನ್ನು ತೇಲಿಸಿ ಮುಳುಗಿಸಿದೆ.ಇಂಥ ಕಾಲ ಪಕ್ಷಿ ಕಂಡಿದಿರಾ ಎಂದು ಕವಿಯ ವಿಚಾರ.

ಕಾಲಪಕ್ಷಿ ಯುಗ ಯುಗಗಳ ಅದೃಷ್ಟ ಬದಲಾಯಿಸಿ ಬಾರಿ ಬದಲಾವಣೆ ತಂದಿದೆ ನಾವು ಗಮನಿಸಿದ ಹಾಗೆ ಒಂದು ಕಾಲದಲ್ಲಿ ಅತ್ಯಂತ ಸುಸ್ಥಿತಿಯಲ್ಲಿ ಇರುವ ದೇಶಗಳು ಇಂದು ಅಭಿವೃದ್ಧಿ ಸಾಧಿಸಿದ್ದು,ಅನ್ೇಕ ಸಮಸ್ಯೆ ಸವಾಲುಗಳ ಮದ್್ೈ ಸಾಧನೆ ಮಾಡಿದ ಅನೇಕ ಮಹನೀಯರ ಇದ್ದಾರೆ.ಕಾಲ ಪಕ್ಷಿ ತನ್ನ ರೆಕ್ಕೆಯಿಂದ ಗಾಳಿ ಹಾಕುತ್ತಾ ಜಗತ್ತಿಗೆ ಶಕ್ತಿ ನೀಡುತ್ತದೆ ಅಲ್ಲದೇ ಹೊಸ ಜನಾಂಗ ಹುರಿದುಂಬಿಸುತ್ತಾ ಆಶೆಗಳನ್ನು ಅವರಲ್ಲಿ ಚಿಗುರಿಸಿ ತನ್ನ ಗುಟ್ಟು ಬಿಟ್ಟು ಕೊಡದ ಕಾಲ ಪಕ್ಷಿಯನ್ನು ಕಂಡಿರುವಿರಾ ಎಂದು ಕವಿ ಕೇಳುವರು.

ಬರಹ. :- ಶ್ರೀ ರಂಗನಾಥ ಎನ್ ವಾಲ್ಮೀಕಿ ಸ.ಶಿ ಸ.ಪ್ರೌ. ಶಾಲೆ ದೇವಿಕೊಪ್ಪ ಜಿ.ಧಾರವಾಡ